ಅಷ್ಟರಲ್ಲಿ ಒಬ್ಬ ಆಟೊದವನು ಹತ್ತಿರ ಬಂದು ನಿಂತ.

'ಕೆಂಪೇಗೌಡನಗರ ಹೋಗಬೇಕು, ಬರ್ತೀರಾ?' ಎಂದವಳು ದೀನಳಾಗಿ ಕೇಳಿದಳು.

ಡ್ರೈವರ್ ನಡು ವಯಸ್ಸಿನವನು. ಎದುರಿನ ಹಲ್ಲುಗಳು ಬಿದ್ದು ಹೋದ ಕಾರಣ ವಯಸ್ಸಿಗಿಂತ ದೊಡ್ಡವನಾಗಿ ಕಾಣುತ್ತಿದ್ದ. ಗಡ್ಡ ಬಿಟ್ಟಿದ್ದ. ಬೋಳುತಲೆ. 'ಇಲ್ಲಮ್ಮ. ನಾನು ಇಲ್ಲೇ ಬಲಕ್ಕೆ ಮಸೀದಿಯ ಬಳಿಗೆ ಹೋಗಬೇಕು. ಮಹಮ್ಮಡನ್ ಬ್ಲಾಕಿಗೋ ಎಂದು ವಿಚಾರಿಸಲು ನಿಂತೆ' ಎಂದ. ಎಡಗೈಯಿಂದ ಹ್ಯಾಂಡಲ್ ಎತ್ತಿ ಆಟೊ ಸ್ಟಾರ್ಟ್ ಮಾಡಿದ. ಮುಂದಕ್ಕೆ ಹೋದ. ಅವಳು ನಿಸ್ಸಹಾಯಳಾಗಿ, ಓಡುತ್ತಿದ್ದ ಆಟೊದ ಹಿಂಭಾಗವನ್ನೇ ದಿಟ್ಟಿಸಿ ನೋಡಿದಳು. ಯಾವುದೋ ಪೈಪಿನ ಜಾಹೀರಾತನ್ನು ನಟ ಪ್ರಕಾಶ್ ರೈ ತೋರಿಸುತ್ತಿದ್ದ.

ಕ್ಷಣಕ್ಷಣಕ್ಕೂ ಅವಳಿಗೆ 'ಡೇ ಕೇರ್'ನ ಮೇಮ್‌ಳದ್ದೇ ಸಿಂಡರಿಸಿಕೊಂಡ ಮುಖ ನೆನಪಾಗುತ್ತಿತ್ತು. ಇವತ್ತು ಆಕೆ ಬಾಯಿಗೆ ಬಂದ ಹಾಗೆ ಬಯ್ಯಬಹುದು. ನಾಳೆಯಿಂದ ನಿಮ್ಮ ಮಗುವನ್ನು 'ಡೇ ಕೇರ್ ಸೆಂಟರ್'ನಲ್ಲಿ ಬಿಡುವುದು ಬೇಡ ಎಂದು ಆಕೆ ಹೇಳಬಹುದು ಎಂದುಕೊಂಡಳು. ಅದಕ್ಕಿಂತ ಹೆಚ್ಚಾಗಿ ಅವಳಿಗೆ ಮಗಳು ನೆನಪಾದಳು. ಬೆಳಗ್ಗೆ ಒಂಬತ್ತೂವರೆಗೆ ಶಾಲೆಯ ಬಸ್ ಹತ್ತಿಸಿ ಬಂದದ್ದು. ಬ್ಯಾಗ್, ಟಿಫಿನ್ ಕ್ಯಾರಿಯರ್, ಸಂಜೆಯ ತಿಂಡಿ ಎಲ್ಲ ಕೊಟ್ಟು ಬಂದದ್ದು. ಅವನ್ನೇ ತಿಂದು ಅಮ್ಮನಿಗಾಗಿ ಕಾಯುತ್ತಾ ಇದೆ ಆ ಮಗು. ಎಷ್ಟು ಹಸಿವೆಯಾಗಿದೆಯೋ ಏನೋ! 'ಡೇ ಕೇರ್'ನ ಇತರ ಮಕ್ಕಳನ್ನು ಆಯಾಯ ತಂದೆ ತಾಯಂದಿರು ಕರಕೊಂಡು ಹೋಗುವಾಗ ಅವಳೊಬ್ಬಳೇ ಉಳಿಯುತ್ತಾಳೆ. ಪ್ರತಿಸಲ ಕರೆಗಂಟೆಯೊತ್ತಿದಾಗ ಬಂದವಳು ತನ್ನ ತಾಯಿಯೇ ಅಂತ ಆಸೆಯಿಂದ ಪ್ರತೀ ಮಗುವೂ ಕಣ್ಣರಳಿಸಿ ನಿಲ್ಲುತ್ತದೆ. ಇನ್ನೊಬ್ಬಳ ತಾಯಿ ಎಂದಾಗ ಆ ಮಕ್ಕಳ ಕಣ್ಣಿನಲ್ಲಿ ಮೂಡುವ ನಿರಾಸೆಯನ್ನು ಅವಳು ಗಮನಿಸಿದ್ದಾಳೆ.

ಇಷ್ಟಕ್ಕೂ ತನ್ನ ದುರ್ದೈವವೆಲ್ಲ ಆ ಗೃಧ್ರುವಿನಲ್ಲೇ ಅಡಗಿದೆ. ಹೆಣ್ಣು ಮಕ್ಕಳನ್ನು ರಾತ್ರಿಯ ತನಕ ದುಡಿಸುವುದು ಸರಿಯಲ್ಲ ಎಂದು ಅದಕ್ಕೇಕೆ ತಿಳಿಯುವುದಿಲ್ಲ? ಒಂಟಿ ಹೆಣ್ಣು ಕತ್ತಲಾದ ಮೇಲೆ ಮನೆಗೆ ಹೋಗುವಾಗ ಎಷ್ಟೊಂದು ಅಪಾಯಗಳಿದ್ದಾವೆ ಎಂಬ ಸಾಮಾನ್ಯ ಜ್ಞಾನವೂ ಆ ಗೃಧ್ರಕ್ಕೆ ಇಲ್ಲವಲ್ಲ? ರಾತ್ರಿ ಎಂಟರ ತನಕ ಕೆಲಸ ಮಾಡಿಸಿ ಈ ಕಂಪೆನಿಯ ಏನು ಉದ್ಧಾರ ಮಾಡುತ್ತಾನವನು? ಇಷ್ಟರಲ್ಲಿ ಅವನು ಮನೆ ಮುಟ್ಟಿರಬಹುದು. ಸೋಫಾದ ಪಕ್ಕದಲ್ಲಿ ಎಂಜಲು ಕಾಫಿ ಕಪ್ ಕೂತಿರಬಹುದು. ಅದನ್ನೂ ಹೆಂಡತಿಯೇ ತೆಗೆಯಬೇಕು. ಟೀವಿಯಲ್ಲಿ ವಾರ್ತೆಗಳನ್ನು ನೋಡುತ್ತಿರಬಹುದು ಅಥವಾ ಬೆಳಗಿನ ಹೊತ್ತು ಅರ್ಧ ಓದಿದ 'ಟೈಮ್ಸ್ ಆಫ್ ಇಂಡಿಯಾ'. ಅವಳಿಗೆ ಅರ್ಧ ನಿಮಿಷದಲ್ಲಿ ಓದಿ ಮುಗಿಸುವ ಪತ್ರಿಕೆಯಲ್ಲಿ ಬರುವ ಸುದ್ದಿಗಳ ನೆನಪಾಯಿತು. ಆಟೊದಲ್ಲಿ ಒಂಟಿ ಹೆಣ್ಣೊಬ್ಬಳನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಮೂರು ನಾಲ್ಕು ಮಂದಿ ಅತ್ಯಾಚಾರವೆಸಗಿದ ಸುದ್ದಿ ಆಗಾಗ ಬರುತ್ತಿತ್ತು. ಅವನ್ನು ಓದಿದಾಗೆಲ್ಲ ರಾತ್ರಿಯ ಹೊತ್ತು ತಾನೂ ಒಂಟಿಯಾಗಿ ಓಡಾಡುವುದು ಅನಿವಾರ್ಯವಾಗಿದೆಯಲ್ಲ, ಆ ಒಂಟಿ ಹೆಂಗಸರ ಗತಿ ತನಗೂ ಬಂದರೆ ಎಂದು ಭಯವಾಗುತ್ತಿತ್ತು. ಈಗ – ತಾನು ಸಣ್ಣಗೆ ನಡುಗುತ್ತಿರುವುದು ಗಮನಕ್ಕೆ ಬಂದು ಅದು ಆ ಭಯದಿಂದಲೇ ಅಥವಾ ಸುರಿಯುತ್ತಿರುವ ಮಳೆಯಿಂದಲೇ ಅಂತ ಗೊತ್ತಾಗದೆ ಮತ್ತಷ್ಟು ಸಂಕಟಪಟ್ಟಳು. ಅವಳ ಕಣ್ಣಿನಿಂದ ಒಂದೇ ಸಮನೆ ನೀರಿಳಿಯತೊಡಗಿತು.

ಇಷ್ಟಕ್ಕೂ ಸಾರ್ವಜನಿಕ ಸೇವೆಗಾಗಿ ಓಡಾಡುವುದಕ್ಕೆ ಸರಕಾರದಿಂದ ಅಧಿಕೃತ ಪರವಾನಗಿ